# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿಟಿಯು ಅಧಿನಿಯಮ 1994"ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ")

# Visvesvaraya Technological University

(State University of Government of Karnataka Established as per the VTU Act, 1994)
"Jnana Sangama" Belagavi-590018, Karnataka, India

ಡಾ. ಬಿ. ಈ. ರಂಗಸ್ವಾಮಿ
(ಪ್ರಭಾರಿ ಕುಲಸಚಿವರು)

ಫ್ಯಾಕ್ಸ್ ಸಂ: (0831) 2405467
ದೂರವಾಣಿ ಸಂ: (0831) 2405468


ಉಲ್ಲೇಖ: ವಿತಾವಿ/ಬೆಳಗಾವಿ/ಪ್ರಸಾರಾಂಗ/2022-23/4961

ದಿನಾಂಕ : 13 DEC 2022

## ಸುತ್ತೋಲೆ

ಇವರಿಗೆ-
ಪ್ರಾಂಶುಪಾಲರು
ವಿತಾವಿಯ ಸಂಯೋಜಿತ/ಸ್ವಾಯತ್ತ/ಘಟಕ ಕಾಲೇಜುಗಳು.

ವಿಷಯ:- ನಮ್ಮ ವಿಶ್ವವಿದ್ಯಾಲಯದಿಂದ ಪಕ್ರಟಿಸಿರುವ "<u>ಸಾಂಸ್ಕೃತಿಕ ಕನ್ನಡ ಮತ್ತು ಬಳಕೆ ಕನ್ನಡ ಪಠ್ಯಪುಸ್ತಕಗಳನ್ನು ಖರೀದಿಸುವ</u>" ಕುರಿತು-

ಉಲ್ಲೇಖ:-1) ವಿತಾವಿ/ಬೆಳಗಾವಿ/ಪ್ರಸಾರಂಗ/2020-21/ 4026 ದಿನಾಂಕ 01-12-2020

ಮಾನ್ಯರೆ,

ಮೇಲ್ಕಾಣಿಸಿದ ವಿಷಯದನ್ವಯ ವೃತ್ತಿಪರ ಶಿಕ್ಷಣದಲ್ಲಿ (ಇಂಜಿನಿಯರಿಂಗ್ ವಿಭಾಗ) ಕನ್ನಡವನ್ನು ಕಡ್ಡಾಯವಾಗಿ ಬೋಧಿಸುವ ಸಲುವಾಗಿ ಘನ ಸರ್ಕಾರದ ಆದೇಶದ ಮೇರೆಗೆ ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯು, ಪ್ರಸಾರಂಗದ ಮೂಲಕ **ಸಾಂಸ್ಕೃತಿಕ ಕನ್ನಡ** ( ಕನ್ನಡ ಬಲ್ಲವರಿಗೆ) ಹಾಗೂ **ಬಳಕೆ ಕನ್ನಡ** (ಕನ್ನಡ ಕಲಿಯದವರಿಗೆ) ಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಗೊಳಿಸಿದೆ. ಸದರಿ ಪುಸ್ತಕಗಳು 2018, 2021, 2022 ನೇ ವಿತಾವಿಯ ಪಠ್ಯಕ್ರಮದ ಅಡಿಯಲ್ಲಿ ಮೊದಲನೇ ಹಾಗೂ ಎರಡನೇ ವರ್ಷದಲ್ಲಿ ಓದುತ್ತಿರುವ ಬಿ.ಆರ್ಕಿಟೆಕ್ಚರ್/ಬಿ.ಪ್ಲಾನ್/ಬಿ.ಇ/ಬಿ.ಟೆಕ್ ವಿದ್ಯಾರ್ಥಿಗಳಿಗೆ ಅಗತ್ಯವಾಗಿರುತ್ತವೆ. ಈ ಪಠ್ಯಪುಸ್ತಕಗಳು ಕಡ್ಡಾಯವಾಗಿದ್ದು ನಿಮ್ಮ ಕಾಲೇಜುಗಳಲ್ಲಿ ಇರುವ ವಿದ್ಯಾರ್ಥಿಗಳ ನೊಂದಣಿಗೆ (registration) ಅನುಗುಣವಾಗಿ ಪುಸ್ತಕಗಳನ್ನು ಖರೀದಿಸಿದಲು ಈ ಮೂಲಕ ಆದೇಶಿಸಲಾಗಿದೆ. ವಿಶ್ವವಿದ್ಯಾಲಯದ ಸಂಯೋಜಿತ, ಸ್ವಾಯತ್ತ, ಘಟಕ ಕಾಲೇಜುಗಳು ಈ ಪುಸ್ತಕಗಳನ್ನು ಖರೀದಿಸುವುದು ಕಡ್ಡಾಯವಾಗಿದೆ ಅದಕ್ಕಾಗಿ ಈ ಸುತ್ತೋಲೆಯನ್ನು ಸಂಬಂದಪಟ್ಟ ಕಾಲೇಜುಗಳ ಗಮನಕ್ಕೆ ತರಲಾಗುತ್ತಿದೆ.

ಸಾಂಸ್ಕೃತಿಕ ಕನ್ನಡ ಪುಸ್ತಕ ಪ್ರತಿ ಒಂದರ ಬೆಲೆ ರೂ.೫೦/-

ಬಳಕೆ ಕನ್ನಡ ಪುಸ್ತಕ ಪ್ರತಿ ಒಂದರ ಬೆಲೆ ರೂ. ೬೦/- ಆಗಿರುತ್ತದೆ.

ಸದರಿ ಪುಸ್ತಕಗಳನ್ನು ಖರೀದಿಸಲು ವಿತಾವಿಯ ವೆಬಸೈಟ್ https://prasaranga.vtu.ac.in ಇಲ್ಲಿ ಆಯಾ ಕಾಲೇಜಿನ ಪ್ರಾಂಶುಪಾಲರುಗಳು ಪರೀಕ್ಷಾ ಕೆಲಸಕ್ಕೆ ಬಳಸುವ ಕ್ರೆಡೆನ್ಸಿಯಲ್ ಮೂಲಕ ಲಾಗಿನ್ ಆಗಿ ಖರೀದಿಸಬೇಕು. ದಿನಾಂಕ <u>30-12-22</u> ರ ಒಳಗೆ ಎಸ್.ಬಿ.ಐ. ಕಲೆಕ್ಟ್ ಮುಖಾಂತರ Prasaranga-Kannada Text Books ಹೆಡ್‌ನ್ನು ಆಯ್ಕೆ ಮಾಡಿ ಹಣವನ್ನು ಆನ್‌ಲೈನ್ ಮುಖಾಂತರ ಪಾವತಿಸಬೇಕು. ಡಿ.ಡಿ/ಚೆಕ್ ಗಳನ್ನು ಸ್ವೀಕರಿಸಲಾಗದು. ಹಣತುಂಬಿದ ನಂತರ ಹಣ ಪಾವತಿಸಿದ ಮಾಹಿತಿಯನ್ನು ಪೋರ್ಟಲ್‌ನಲ್ಲಿ ದಾಖಲಿಸಬೇಕು. ಹಾಗೇಯೆ ಸದರಿ ಕೆಳಗಿನ ದೂರವಾಣಿ ಸಂಖ್ಯೆಗೆ ಹಣ ಪಾವತಿಸಿದ ರಶೀದಿಯನ್ನು ವಾಟ್ಸಪ್ ಮಾಡಬೇಕು. ಇದಾದ ನಂತರ ವಿತಾವಿಯಿಂದ ಪುಸ್ತಕಗಳನ್ನು ಕಾಲೇಜಿಗೆ ಕಳುಹಿಸಿಕೊಡಲಾಗುವುದು.

ಸದರಿ ಪುಸ್ತಕಗಳ ಕುರಿತಾದ ಮಾಹಿತಿಗೆ ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು – 9845768417.

ಧನ್ಯವಾದಗಳೊಂದಿಗೆ.

Ray BE 13/12/22
ಕುಲಸಚಿವರು

ಪ್ರತಿ

1) ಕುಲಪತಿಗಳ ಆಪ್ತ ಕಾರ್ಯದಶಿಗಳು,ವಿತಾವಿ ಇವರ ದಯಾಪರ ಅವಗಾಹಣೆಗೆ
2) ಕುಲಸಚಿವರ ಆಪ್ತ ಕಾರ್ಯದರ್ಶಿಗಳು ವಿತಾವಿ ಇವರ ದಯಾಪರ ಅವಗಾಹಣೆಗೆ
3) ಕುಲಸಚಿವರು (ಪರೀಕ್ಷಾಂಗ) ವಿತಾವಿ ಇವರ ದಯಾಪರ ಅವಗಾಹಣೆಗೆ
4) ಹಣಕಾಸು ಅಧಿಕಾರಿಗಳು ವಿತಾವಿ ಇವರ ದಯಾಪರ ಅವಗಾಹಣೆಗೆ
5) ನಿರ್ದೇಶಕರು, ಐ.ಟಿ.ಆಯ್.ಎಸ್.ಎಮ್,ಯು ಸಿ.ಎನ್.ಸಿ. ವಿಭಾಗ ವಿತಾವಿ, ಬೆಳಗಾವಿ ಈ ಸುತ್ತೋಲೆಯನ್ನು ವಿತಾವಿ ವೆಬಸೈಟಿನಲ್ಲಿ ಪ್ರಕಟಿಸುವುದು.